

ಹಂತ 2

# ಸುಲಭ

## ವಿದ್ಯಾರ್ಥಿ ಪುಸ್ತಕ

# 01 ಯೇಸು ಕ್ರಿಸ್ತನ ಹಾಗೆ ಪೋಷಣೆ ಮಾಡಿರಿ

**ಸತ್ಯವೇದ ಕಥೆ : 4000 ಜನರಿಗೆ ಊಟ ಕೊಟ್ಟನು**
**ಮತ್ತಾಯ 15:29-38**

## ಕಂಠಪಾಠ ವಚನ


ಯಕೋಬನು 2:15-16
ಒಂದು ವೇಳೆ ಒಬ್ಬ ಸಹೋದರನಾಗಲಿ, ಸಹೋದರಿಯಾಗಲಿ ದಿನನಿತ್ಯ ಊಟಬಟ್ಟೆಗಿಲ್ಲದೆ ಇರುವಾಗ, ನಿಮ್ಮಲ್ಲಿ ಯಾರಾದರು ಅವರಿಗೆ ಅಗತ್ಯವಾದುದನ್ನು ನೀಡದೆ, "ಹೋಗು, ಸುಖವಾಗಿ ಬಾಳು, ಚಳಿ ಕಾಯಿಸಿಕೊ, ಹೊಟ್ಟೆ ತುಂಬಾ ತಿನ್ನು," ಎಂದು ಬರೀ ಬಾಯಿಮಾತಿನಲ್ಲಿ ಉಪಚರಿಸಿದರೆ ಅದರಿಂದಾದ ಪ್ರಯೋಜನವೇನು?



## ಹೋಮ್ ವರ್ಕ್

ನಿಮ್ಮ ಶಾಲೆ ಅಥವಾ ನೆರೆಹೊರೆಯಲ್ಲಿ ಅವಶ್ಯಕತೆಯಲ್ಲಿರುವ ಸಹಪಾಠಿಯನ್ನು ಹುಡುಕಿರಿ. ಒಂದುವೇಳೆ ಸೂಕ್ತ ಅನ್ನಿಸಿದರೆ ಆತನಿಗೆ ಹಣ್ಣು, ಕಾಳು ಅಥವಾ ತಿನ್ನಲು ಬೇರೆ ಏನಾದರೂ ತರುವಂತೆ - ಅಂದರೆ ಅವನಿಗೆ ಮತ್ತು ಅವನ ಕುಟುಂಬದವರಿಗೆ ಒದಗಿಸಲು ಸಹಾಯ ಮಾಡುವಂತೆ ಕೇಳಿಕೊಳ್ಳಿರಿ. ಹಂಚಿಕೊಳ್ಳಲು ಹೆಚ್ಚಿನ ಊಟವನ್ನು ತೆಗೆದುಕೊಂಡು ಹೋಗಿರಿ. ನಿಮ್ಮ ಶಾಲೆಯಲ್ಲಿ ಕಸಗೂಡಿಸುವ ವ್ಯಕ್ತಿಯೊಂದಿಗೂ ನೀವು ಈ ಕಾರ್ಯ ಮಾಡಬಹುದು ಎಂಬದನ್ನು ಮರೆಯಬೇಡಿರಿ.


ಚಿತ್ರಕ್ಕೆ ಬಣ್ಣ ಹಚ್ಚುವದು



# 02 ಎಲ್ಲರಿಗು ಉಚಿತ

ಸತ್ಯವೇದ ಕಥೆ : ಬಾವಿಯ ಬಳಿ ನೀರಿಗೆ ಬಂದ ಸ್ತ್ರೀ
ಯೋಹಾನ 4:14-15

ಚಿತ್ರಕ್ಕೆ ಬಣ್ಣ ಹಚ್ಚುವದು



ನಿಮ್ಮ ಶಾಲೆಯ ಕೋಣೆಯೊಳಗಿರುವ ತೊಂದರೆಯಲ್ಲಿರುವ ಅಥವಾ ಬೇರೆ ಊರಿನಿಂದ ಬಂದಿರುವ ಅಥವಾ ಬೇರೆ ಧರ್ಮದ ಹುಡುಗ ಅಥವಾ ಹುಡುಗಿಯೊಂದಿಗೆ ಮಾತನಾಡಿರಿ. ಪೂರ್ವಾಪರವು ನಿಮ್ಮನ್ನು ದೂರ ಇಡುವಂತೆ ಅನುಮತಿಸಬೇಡಿರಿ. ಮುಂಜಾನೆಯಲ್ಲಿ ಆತನಿಗೆ ಶುಭಾಷಯವನ್ನು ತಿಳಿಸಿರಿ ಅಥವಾ ಆತನ ದಿನ ಹೇಗಿತ್ತು ಎಂದು ತಿಳಿಸಿರಿ. ಒಂದುವೇಳೆ ನಿಮಗೆ ಅನ್ನಿಸಿದರೆ, ನಿಮ್ಮ ಊಟವನ್ನು ಹಂಚಿಕೊಳ್ಳಿರಿ ಮತ್ತು ಅವರ ಪ್ರತಿಕ್ರಿಯೆ ನಕಾರಾತ್ಮಕವಾಗಿದ್ದರೆ ಆಶ್ಚರ್ಯಪಡಬೇಡಿರಿ. ವಾರದ ದಿನಗಳಲ್ಲಿ ಇದನ್ನು ಪ್ರಯತ್ನಿಸಿರಿ ನಂತರ ಸಂಡೆ ಸ್ಕೂಲ್ ಟೀಚರ್ ಬಳಿ ನಡೆದ ಸಂಗತಿಗಳನ್ನು ತಿಳಿಸಿರಿ.

## ಹೋಮ್ ವರ್ಕ್

## ಕಂಠಪಾಠ ವಚನ

ರೋಮನರಿಗೆ 12:16
ನಿಮ್ಮನಿಮ್ಮಲ್ಲಿ ಸಾಮರಸ್ಯವಿರಲಿ. ದೊಡ್ಡಸ್ತಿಕೆಯಿಂದ ವರ್ತಿಸಬೇಡಿ. ದೀನದಲಿತರೊಡನೆ ಗೆಳೆತನ ಬೆಳೆಸಿರಿ. ನೀವೇ ಜಾಣರೆಂದು ಭಾವಿಸದಿರಿ.

# 03 ಎಲ್ಲದಕ್ಕಿಂತಲೂ ಉತ್ತಮವಾದದ್ದು

ಸತ್ಯವೇದ ಕಥೆ : ಐಶ್ವರ್ಯವಂತನಾದ ಯೌವನಸ್ಥ ಅಧಿಕಾರಿ
ಮಾರ್ಕ 10:17-27

## ಹೋಮ್ ವರ್ಕ್

(ಒಂದುವೇಳೆ ನಿಜವಾಗಿಯೂ ನಿಮಗೆ ಮಾಡಬೇಕೆಂದು ಅನ್ನಿಸಿದರೆ) ನಿಮಗೆ ಬಹಳ ಪ್ರಿಯವೆಂದು ಅನ್ನಿಸುವ ಗೊಂಬೆ ಅಥವಾ ವಸ್ತುವನ್ನು ಆಯ್ಕೆ ಮಾಡಿರಿ ಮತ್ತು ಅನೇಕ ಗೊಂಬೆಗಳಿಲ್ಲದೆ ಇರುವವರಿಗೆ ಅದನ್ನು ಕೊಡಿರಿ. ಒಂದುವೇಳೆ ಈ ವಾರ ಇದನ್ನು ಮಾಡಲು ಆಗಲಿಲ್ಲವೆಂದರೆ ಮುಂದಿನ ವಾರ ಪ್ರಯತ್ನಿಸಿರಿ. ಮಾಡಿದ ನಂತರ, ನಿಮ್ಮ ಸಂಡೇ ಸ್ಕೂಲ್ ತರಗತಿಯಲ್ಲಿ ಅದನ್ನು ಹಂಚಿಕೊಳ್ಳಿರಿ. ಅನುಭವವನ್ನು ತಿಳಿಸಿರಿ?

ಚಿತ್ರಕ್ಕೆ ಬಣ್ಣ ಹಚ್ಚುವದು




ಮಾರ್ಕ 8:35 "ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಹಾತೊರೆಯುವವನು ಅದನ್ನು ಕಳೆದುಕೊಳ್ಳುವನು. ಆದರೆ ನನ್ನ ನಿಮಿತ್ತ ಹಾಗೂ ಶುಭಸಂದೇಶದ ನಿಮಿತ್ತ ತನ್ನ ಪ್ರಾಣವನ್ನು ಕಳೆದುಕೊಳ್ಳುವವನು ಅದನ್ನು ನಿತ್ಯಕ್ಕೂ ಉಳಿಸಿಕೊಳ್ಳುವನು."

## ಕಂಠಪಾಠ ವಚನ

# 04 ಯೇಸು ಕ್ರಿಸ್ತನ ಮಾತುಗಳನ್ನು ಕೇಳಿರಿ

**ಸತ್ಯವೇದ ಕಥೆ : ಯೇಸು ಕ್ರಿಸ್ತನು 10 ಮಂದಿ ಕುಷ್ಠರೋಗಿಗಳನ್ನು ಗುಣಪಡಿಸಿದನು: ಲೂಕ 17:11-19**

ಚಿತ್ರಕ್ಕೆ ಬಣ್ಣ ಹಚ್ಚುವದು



## ಹೋಮ್ ವರ್ಕ್

ನೀವು ದೇವರ ಹತ್ತಿರ ಬೇಡಿಕೊಂಡಿರುವ ಮತ್ತು ಆತನಿಂದ ಪಡೆದುಕೊಂಡಿರುವ ವಿಷಯಗಳ ಬಗ್ಗೆ ಆಲೋಚಿಸಿರಿ ಒಂದುವೇಳೆ ನೀವು ಬೇಡಿಕೊಂಡಿರುವವುಗಳಿಗೆ ಆತನು ನಿಮ್ಮ ಕುಟುಂಬದರ ಅಥವಾ ನಿಮ್ಮ ಸ್ವಂತ ಜೀವಿತದ ವಿಷಯದಲ್ಲಿ ಉತ್ತರ ಕೊಟ್ಟಿರುವದಾದರೆ, ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಲು ಸಮಯ ತೆಗೆದುಕೊಳ್ಳಿರಿ, ನಂತರ ಅದರ ಬಗ್ಗೆ ಸಂಡೇ ಸ್ಕೂಲ್ ಟೀಚರ್ ಗೆ ಹೇಳಿರಿ.

## ಕಂಠಪಾಠ ವಚನ

ಫಿಲಿಪ್ಪಿಯರಿಗೆ 4:6 "ಯಾವ ವಿಷಯದಲ್ಲೂ ಚಿಂತಿಸದೆ, ನಿಮ್ಮ ಅಗತ್ಯಗಳಿಗಾಗಿ ದೇವರಲ್ಲಿ ಪ್ರಾರ್ಥಿಸಿರಿ. ಪ್ರಾರ್ಥಿಸುವಾಗಲೆಲ್ಲಾ ನಿಮ್ಮಲ್ಲಿ ಕೃತಜ್ಞತಾಭಾವ ಇರಲಿ."

# 05 ಯೇಸು ಕ್ರಿಸ್ತನ ಹಾಗೆ ದೀನತೆಯುಳ್ಳವರಾಗಿರಿ


ಸತ್ಯವೇದ ಕಥೆ : ಯೇಸು ಕ್ರಿಸನು ತನ್ನ ಶಿಷ್ಯರ ಕಾಲುಗಳನ್ನು ತೊಳೆದನು: ಯೋಹಾನ 13:3-17



ಚಿತ್ರಕ್ಕೆ ಬಣ್ಣ ಹಚ್ಚುವದು

## ಹೋಮ್ ವರ್ಕ್

ಕೆಲಸಗಳಲ್ಲಿ ಸ್ವಲ್ಪ ಸಹಾಯ ಮಾಡಿರಿ ಎಂದು ಯಾರೂ ಕೇಳದೆ ಇದ್ದರೂ ನೀವು ನಿಮ್ಮ ಮನೆಯ ಅಥವಾ ಶಾಲೆಯ ಕೆಲಸಗಳನ್ನು ಮಾಡಿರಿ. ಶಾಲೆಯಲ್ಲಿ, ನೀವು ಶುಚಿ ಮಾಡದೆ ಬಿಟ್ಟಿರುವ ಕಸವನ್ನು ತೆಗೆಯಲು ಸಹಾಯ ಮಾಡಿರಿ.



## ಕಂಠಪಾಠ ವಚನ

ಫಿಲಿಪ್ಪಿಯರಿಗೆ 2:3-4

"ಸ್ವಾರ್ಥಸಾಧನೆಗಾಗಲಿ, ಡಂಭಾಚಾರಕ್ಕಾಗಲಿ ಏನನ್ನೂ ಮಾಡಬೇಡಿ. ಪರಸ್ಪರ ನಮ್ರತೆಯಿಂದ ನಡೆದುಕೊಳ್ಳಿ; ಇತರರು ನಿಮಗಿಂತಲೂ ಶ್ರೇಷ್ಠರೆಂದು ಪರಿಗಣಿಸಿರಿ. ಸ್ವಹಿತವನ್ನೇ ಗಮನಿಸದೆ ಪರರ ಹಿತವನ್ನೂ ಬಯಸಿರಿ."

# 06 ಯೇಸು ಕ್ರಿಸ್ತನ ಹಾಗೆ ಆತ್ಮಭಾರವುಳ್ಳವರಾಗಿರಬೇಕು

ಸತ್ಯವೇದ ಕಥೆ : ಯೇಸು ಕ್ರಿಸ್ತನು ಮೇಜುಗಳನ್ನು ಕೆಡವಿದನು: ಮಾರ್ಕ 11:15-17 (ಯೋಹಾನ 2:13-17)

ಚಿತ್ರಕ್ಕೆ ಬಣ್ಣ ಹಚ್ಚುವದು



## ಕಂಠಪಾಠ ವಚನ


ಮತ್ತಾಯ 23:13
"ಕಪಟ ಧರ್ಮಶಾಸ್ತ್ರಿಗಳೇ ಮತ್ತು ಫರಿಸಾಯರೇ, ನಿಮಗೆ ಧಿಕ್ಕಾರ! ಸ್ವರ್ಗಸಾಮ್ರಾಜ್ಯದ ದ್ವಾರಗಳನ್ನು ಮಾನವರಿಗೆ ಮುಚ್ಚಿದ್ದೀರಿ. ನೀವೂ ಪ್ರವೇಶಿಸುವುದಿಲ್ಲ, ಒಳಕ್ಕೆ ಪ್ರವೇಶಿಸಲು ಯತ್ನಿಸುವವರನ್ನೂ ಬಿಡುವುದಿಲ್ಲ."

## ಹೋಮ್ ವರ್ಕ್

ನೀವು ದೇವರನ್ನು ಪ್ರೀತಿಸುವದಕ್ಕಿಂತ ಹೆಚ್ಚಾಗಿ ಪ್ರೀತಿಸುವ ವಸ್ತುಗಳು ಅಥವಾ ಜನರ ಪಟ್ಟಿಯನ್ನು ಮಾಡಿರಿ ಮತ್ತು ದೇವರ ವಿಷಯದಲ್ಲಿ ನಿಮಗಿರುವ ಆತ್ಮಭಾರಗಳಿಗೆ ಅವು ಕಾರಣವಾಗಿದ್ದರೆ ಯೋಚಿಸಿರಿ (ಉದಾಹರಣೆಗೆ ಗರ್ಲ್ ಫ್ರೆಂಡ್ ಅಥವಾ ಬಾಯ್ ಫ್ರೆಂಡ್, ಶಾಲೆಯ ಕೆಲಸ, ಸೆಲ್ ಫೋನ್, ಕ್ರೀಡೆ, ಗೊಂಬೆಗಳು, ಸ್ನೇಹಿತರು). ದೇವರ ದೃಷ್ಟಿಯ ಮೂಲಕ ನೋಡಲು ಸಹಾಯ ಮಾಡುವಂತೆ ದೇವರನ್ನು ಬೇಡಿಕೊಳ್ಳಿರಿ. ಹಾಗೆಯೇ ಈ ವಾರದಲ್ಲಿ ದೇವರೊಂದಿಗೆ ಮಾತನಾಡಲು ಹೆಚ್ಚು ಸಮಯವನ್ನು ತೆಗೆದುಕೊಳ್ಳಿರಿ."

# 07 ಯೇಸು ಕ್ರಿಸ್ತನ ಹೃದಯ ಪ್ರಕಟಗೊಂಡಿದೆ

ಸತ್ಯವೇದ ಕಥೆ : ಗೆತ್ಸೇಮನೆ ತೋಟ
ಮತ್ತಾಯ 26:36-39,47-57



**ಕಂಠಪಾಠ ವಚನ**

ಲೂಕ 6:27 "ನನ್ನನ್ನು ಆಲಿಸುತ್ತಿರುವವರೇ, ನನ್ನ ಮಾತನ್ನು ಕೇಳಿರಿ: 'ನಿಮ್ಮ ಶತ್ರುಗಳನ್ನು ಪ್ರೀತಿಸಿರಿ, ನಿಮ್ಮನ್ನು ದ್ವೇಷಿಸುವವರನ್ನು ಸತ್ಕರಿಸಿರಿ."



**ಹೋಮ್ ವರ್ಕ್**

ಕೆಲಸಗಳಲ್ಲಿ ಸ್ವಲ್ಪ ಸಹಾಯ ಮಾಡಿರಿ ಎಂದು ಯಾರೂ ಕೇಳದೆ ಇದ್ದರೂ ನೀವು ನಿಮ್ಮ ಮನೆಯ ಅಥವಾ ಶಾಲೆಯ ಕೆಲಸಗಳನ್ನು ಮಾಡಿರಿ. ಶಾಲೆಯಲ್ಲಿ, ನೀವು ಶುಚಿ ಮಾಡದೆ ಬಿಟ್ಟಿರುವ ಕಸವನ್ನು ತೆಗೆಯಲು ಸಹಾಯ ಮಾಡಿರಿ.

ಚಿತ್ರಕ್ಕೆ ಬಣ್ಣ ಹಚ್ಚುವದು

# 08 ಅನ್ಯಾಯ!


ಸತ್ಯವೇದ ಕಥೆ : ಯೇಸು ಕ್ರಿಸ್ತನ ವಿಚಾರಣೆ
ಮಾರ್ಕ 14:57-65,15:1-15

## ಕಂಠಪಾಠ ವಚನ

ಯೆಶಾಯ 53:9
"ಮಾಡಲಿಲ್ಲ ಆತ ಯಾವ ಪಾಪಕೃತ್ಯ ಅವನ ಬಾಯಲಿರಲಿಲ್ಲ ವಂಚನೆಯ ವಾಕ್ಯ ಹೂಣಿದರಾತನನು ಸತ್ತಮೇಲೆ ದುರುಳರ ಹಾಗೂ ದುಷ್ಕರ್ಮಿಗಳ ನಡುವೆ."



ಚಿತ್ರಕ್ಕೆ ಬಣ್ಣ ಹಚ್ಚುವದು




## ಹೋಮ್ ವರ್ಕ್

ಒಂದುವೇಳೆ ಈ ವಾರದಲ್ಲಿ ಯಾರಾದರು ಅನ್ಯಾಯವಾಗಿ ನಿಮ್ಮ ಮೇಲೆ ಆರೋಪ ಮಾಡಿದರೆ, ನಿಮ್ಮನ್ನು ಸಮರ್ಥಿಸಿಕೊಳ್ಳಬೇಡಿರಿ. ತಾನು ತಪ್ಪು ಮಾಡಿರುವದು ಆ ವ್ಯಕ್ತಿಗೆ ಗೊತ್ತಾಗುವಂತೆ ಮತ್ತು ಅವನು ಅದನ್ನು ಒಪ್ಪಿಕೊಳ್ಳುವಂತೆ ಮಾಡು ಎಂದು ದೇವರನ್ನು ಪ್ರಾರ್ಥಿಸಿರಿ. ಒಂದುವೇಳೆ ಅವನು ಈ ಕಾರ್ಯಗಳನ್ನು ಮಾಡದೆ ಹೋದರೆ ದೇವರು ತಾನೇ ತನ್ನ ಸಮಯದಲ್ಲಿ ಮಾಡುವನು.

## 09 ಮರಣದಲ್ಲಿ ಜೀವ

**ಸತ್ಯವೇದ ಕಥೆ : ಯೇಸು ಕ್ರಿಸ್ತನನ್ನು ಶಿಲುಬೆಗೆ ಜಡಿದರು: ಮತ್ತಾಯ 27:27-31,45-54**

ಚಿತ್ರಕ್ಕೆ ಬಣ್ಣ ಹಚ್ಚುವದು



**ಕಂಠಪಾಠ ವಚನ**

ಯೆಶಾಯ 53:5 "ಗಾಯಗೊಂಡನಾತ ನಮ್ಮ ಪಾಪಗಳ ನಿಮಿತ್ತ ಜಜ್ಜರಿತನಾದ ನಮ್ಮ ದ್ರೋಹಗಳ ದೆಸೆಯಿಂದ. ಶಿಕ್ಷೆಗೊಳಗಾದ ನಮ್ಮ ರಕ್ಷಣೆಗಾಗಿ ಪೆಟ್ಟುತಿಂದ ನಮ್ಮ ಸ್ವಸ್ಥತೆಗಾಗಿ."


**ಹೋಮ್ ವರ್ಕ್**

ಯೇಸು ಕ್ರಿಸ್ತನನ್ನು ಶಿಲುಬೆಗೆ ಹಾಕಿದರು ಎಂಬ ವಿಷಯ ನಿಮಗೆ ತಿಳಿದಾಗ ಮತ್ತು ಆತನು ನಿಮಗೆ ರಕ್ಷಣೆಯ ವರವನ್ನು ಉಚಿತವಾಗಿ ಕೊಟ್ಟಿರುವನು ಗೊತ್ತಾದಾಗ ನಿಮಗೆ ಹೇಗೆ ಅನ್ನಿಸಿತು ಎಂಬದನ್ನು ನಿಮಗೆ ಬರವಸೆಯಿರುವ ಜನರೊಂದಿಗೆ ಅಥವಾ ನಿಮ್ಮ ತಂದೆತಾಯಿಗಳೊಂದಿಗೆ ಹೇಳಿರಿ.

# 10 ದುಷ್ಟನು ರಕ್ಷಣೆ ಹೊಂದಿದನು

**ಸತ್ಯವೇದ ಕಥೆ : ಶಿಲುಬೆಗೆ ಹಾಕಲ್ಪಟ್ಟಿದ್ದ ಕಳ್ಳನು**
**ಲೂಕ 23:32-33,39-43**

ಚಿತ್ರಕ್ಕೆ ಬಣ್ಣ ಹಚ್ಚುವದು



## ಕಂಠಪಾಠ ವಚನ

ರೋಮನರಿಗೆ 10:11 "ಏಕೆಂದರೆ, "ಅವನಲ್ಲಿ ವಿಶ್ವಾಸ ಇಡುವ ಯಾರಿಗೂ ಆಶಾಭಂಗವಾಗುವುದಿಲ್ಲ," ಎಂದು ಪವಿತ್ರಗ್ರಂಥದಲ್ಲೇ ಹೇಳಲಾಗಿದೆ."

## ಹೋಮ್ ವರ್ಕ್

ದೇವರು ನಿಮಗೆ ಸಹಾಯ ಮಾಡುವನೆಂದು ನೀವು ಭರವಸೆಯಿಡುವ ವಿಷಯಗಳ ಪಟ್ಟಿಯನ್ನು ಮಾಡಿರಿ. ಯಾರ ಜೊತೆಯಲ್ಲಾದರೂ ಅದರ ಬಗ್ಗೆ ಮಾತನಾಡಿರಿ. ಪಟ್ಟಿಯ ಕೆಳಗೆ ರೋಮಾ 10:11 ವಚನವನ್ನು ಬರೆಯಿರಿ, "ವಚನವು ಹೇಳುವದೇನೆಂದರೆ, "ಆತನ ಮೇಲೆ ನಂಬಿಕೆಯಿಡುವ ಯಾವನಾದರೂ ಆಶಾಭಂಗಪಡುವದಿಲ್ಲ."

# 11 ಘೋರವಾದ ದಿನ ಅತ್ಯುತ್ತಮ ದಿನವಾಗಿ ಬದಲಾಯಿತು

ಸತ್ಯವೇದ ಕಥೆ : ಯೇಸು ಕ್ರಿಸ್ತನ ಪುನರುತ್ಥಾನ:
ಮತ್ತಾಯ 27:57-61,28:1-10, ಲೂಕ 24:36-48

ಚಿತ್ರಕ್ಕೆ ಬಣ್ಣ ಹಚ್ಚುವದು



## ಹೋಮ್ ವರ್ಕ್

ಊಟದ ಸಮಯದಲ್ಲಿ, ಸಭೆಯ ಚಟುವಟಿಕೆಯಲ್ಲಿ ನಿಮಗಾದ ಉತ್ತಮ ಅನುಭವವನ್ನು ಹಂಚಿಕೊಳ್ಳಿರಿ. ಯಾಕೆ ಎಂಬದನ್ನೂ ಅವರಿಗೆ ಹೇಳಿರಿ.



## ಕಂಠಪಾಠ ವಚನ

ಹಿಬ್ರಿಯರಿಗೆ 11:1 "ವಿಶ್ವಾಸವೆಂಬುದು ನಾವು ನಿರೀಕ್ಷಿಸುವಂಥವುಗಳು ನಮಗೆ ದೊರಕುತ್ತವೆ ಎಂಬ ದೃಢ ನಂಬಿಕೆ ಹಾಗು ಕಣ್ಣಿಗೆ ಕಾಣದಂಥವುಗಳು ನಿಶ್ಚಯವಾದವು ಎಂಬ ನಿಲುವು ಆಗಿದೆ."

# 12 ಅಸಾಧ್ಯ ವಿಶ್ವಾಸಿ


ಸತ್ಯವೇದ ಕಥೆ : ಸೌಲನು ನಂಬಿದನು
ಅಪೊ 9:1-20

ಚಿತ್ರಕ್ಕೆ ಬಣ್ಣ ಹಚ್ಚುವದು



## ಕಂಠಪಾಠ ವಚನ

ಪ್ರೇಷಿತರ ಕಾರ್ಯಕಲಾಪಗಳು 1:8
"ಆದರೆ ಪವಿತ್ರಾತ್ಮ ಅವರು ನಿಮ್ಮ ಮೇಲೆ ಬಂದಾಗ ನೀವು ಶಕ್ತಿಯುತರಾಗುವಿರಿ. ಆಗ ನೀವು ಜೆರುಸಲೇಮಿನಲ್ಲೂ ಜುದೇಯದಲ್ಲೂ ಸಮಾರಿಯದಲ್ಲೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗುವಿರಿ," ಎಂದರು."



## ಹೋಮ್ ವರ್ಕ್

ನೀವು ಯೇಸು ಕ್ರಿಸ್ತನನ್ನು ಹೇಗೆ ನಂಬಿದಿರಿ, ಆತನ ಬಗ್ಗೆ ನಿಮಗೆ ಹೇಳಿದವರು ಯಾರು ಎಂಬದನ್ನು ನಿಮ್ಮ ತರಗತಿಯವರಿಗೆ ಹೇಳಿರಿ. ಒಂದುವೇಳೆ ಯೇಸು ಕ್ರಿಸ್ತನ ಬಗ್ಗೆ ಬೋಧಿಸಬೇಕೆಂದು ನಿಮಗೆ ಅನ್ನಿಸಿದರೆ, ನೀವು ಸಭಾಪಾಲಕರಾಗುತ್ತೀರೋ, ಸುವಾರ್ತಿಕನಾಗುತ್ತೀರೋ, ಅಥವಾ ಬೇರೆ ಯಾವುದಾದರು ಕಾರ್ಯವನ್ನು ಮಾಡುತ್ತೀರೋ.


# 13 ನಾನೂ ಬರಬಹುದೇ?

ಸತ್ಯವೇದ ಕಥೆ : ಪೇತ್ರನು ರಕ್ಷಣೆಯ ಸಂದೇಶವನ್ನು ಸಾರಿದನು: ಅಪೊ 2:14,36-40

## ಹೋಮ್ ವರ್ಕ್

ಇತ್ತೀಚೆಗೆ ನೀವು ಯಾರಿಗಾದರೂ ಸುಳ್ಳು ಹೇಳಿರುವದು ನಿಮಗೆ ನೆನಪಿರುವದಾದರೆ, ಆ ವ್ಯಕ್ತಿಯನ್ನು ಭೇಟಿ ಮಾಡಲು ಪ್ರಯತ್ನಿಸಿರಿ ಮತ್ತು ಕ್ಷಮಾಪಣೆ ಕೇಳಿರಿ.


ಚಿತ್ರಕ್ಕೆ ಬಣ್ಣ ಹಚ್ಚುವದು



## ಕಂಠಪಾಠ ವಚನ

ಯೊವಾನ್ನ 3:16 "ದೇವರು ಲೋಕವನ್ನು ಎಷ್ಟಾಗಿ ಪ್ರೀತಿಸಿದರೆಂದರೆ ತಮ್ಮ ಏಕೈಕ ಪುತ್ರನನ್ನೇ ಧಾರೆಯೆರೆದರು; ಆತನಲ್ಲಿ ವಿಶ್ವಾಸವಿಟ್ಟ ಯಾರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂಬುದೇ ದೇವರ ಉದ್ದೇಶ."


# ಅಧಿಕ ಚಟುವಟಿಕೆಗಳು!




ಟೈಮ್ ಮೆಷಿನ್



ರೋಬೋಟ್ ನಾಯಿ



ದಾರಿಗಳ ತೊಡಕು



# ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಇರ್ರಿ.



ಎಫೆಸಿಯರಿಗೆ **4:32** " ಪರಸ್ಪರ ಕರುಣೆಯಿಂದಲೂ ಕನಿಕರದಿಂದಲೂ ವರ್ತಿಸಿರಿ. ಯೇಸುಕ್ರಿಸ್ತರಲ್ಲಿ ದೇವರು ನಿಮ್ಮನ್ನು ಕ್ಷಮಿಸಿದಂತೆಯೇ, ನೀವು ಸಹ ಒಬ್ಬರನ್ನೊಬ್ಬರು ಕ್ಷಮಿಸಿರಿ."

Time Machine 2
Easy Kannada

11211

www.ChildrenAreImportant.com
pedidos@losninoscuentan.com
México: 01-800-839-1009 01-592-924-9041

ಮಕ್ಕಳೇ ಪ್ರಮುಖರು